ಜಾತ್ರೆಗಳು ನಮ್ಮ ಜನಪದದ ಚೈತನ್ಯದ ಮರುಪೂರಣದ ಮೂಲಸೆಲೆಗಳು; ನಮ್ಮ ಬಹುಮುಖಿ ಸಂಸ್ಕೃತಿಯ ತಾಯಿಬೇರುಗಳು. ಹತ್ತೂರಿನ ಜನ ಸೇರಿ ಎಳೆಯುವ ತೇರು ಕಳೆಗಟ್ಟುವುದು ಭಕ್ತಿಯಿಂದಷ್ಟೇ ಅಲ್ಲ. ರಂಜನೆ, ಆವೇಶ ಮತ್ತು ಆನಂದ ಈ ಮೂರೂ ಭಾವಗಳು ಬೆರೆತ ಅದೃಶ್ಯ ತಂತುವೊಂದು ಲಕ್ಷಾಂತರ ಜನರನ್ನು ಒಂದೆಡೆ ಸೇರಿಸುತ್ತದೆಂದರೆ ಅದೇನು ಸಣ್ಣ ಸಂಗತಿಯೇ? ಶ್ರಮಸಂಸ್ಕೃತಿಗೂ ಜಾತ್ರೆಗಳಿಗೂ ಪರಸ್ಪರ ಅವಿನಾಭಾವ ಸಂಬಂಧವಿದೆ. ಹಾಗಾಗಿಯೇ ಪೈರು ಕೈಗೆ ಬರುತ್ತಿರುವ ಹೊತ್ತಿನಲ್ಲಿಯೇ ಜಾತ್ರೆಗಳ ಕಾಲ ಆರಂಭವಾಗುತ್ತದೆ. ಕರ್ನಾಟಕದಲ್ಲಿಯಂತೂ ಊರು ಊರಿಗೊಂದು ಜಾತ್ರೆ. ಒಂದೊಂದೂ ಆಚರಣೆಯ ದೃಷ್ಟಿಯಿಂದ ವಿಶಿಷ್ಟ, ವಿಶೇಷ. ಆಧುನಿಕ ಸಂದರ್ಭದಲ್ಲಿ ಅನುದಿನವೂ ಜಾತ್ರೆಯ ವಾತಾವರಣ. ಹಾಗಿದ್ದರೂ ಬಂಧುಮಿತ್ರರೊಂದಿಗೆ ಇಡೀ ಊರನ್ನು ಒಂದು ಬಿಂದುವಿಗೆ ತಂದು ನಿಲ್ಲಿಸುವ ಜಾತ್ರೆಗಳ ಅನನ್ಯತೆ ಕಡಿಮೆಯಾಗಿಲ್ಲ. ಕರ್ನಾಟಕದ ವಿವಿಧ ಭಾಗಗಳಲ್ಲಿ ನಡೆಯುವ ಜಾತ್ರೆಗಳನ್ನು ಪರಿಚಯಿಸುವ ಈ ಪ್ರಯತ್ನ, ನಾಡಿನ ಸಾಂಸ್ಕೃತಿಕ ಧಾರೆಗಳನ್ನು ಒಟ್ಟಿಗೆ ಕಾಣುವ ಪ್ರಯತ್ನವೂ ಆಗಿದೆ.

■ **ಕೆ. ನರಸಿಂಹಮೂರ್ತಿ**



ಬಾಗಲಕೋಟೆ ಜಿಲ್ಲೆ ಬಾದಾಮಿ ಸಮೀಪದ ಬನಶಂಕರಿಯಲ್ಲಿ ನಡೆಯುವ ರಥೋತ್ಸವದ ವೈಭವ ನೋಡಿಯೇ ತಣಿಯಬೇಕು. ಲಕ್ಷಾಂತರ ಭಕ್ತರು ಸೇರುವ ಈ ರಥೋತ್ಸವ ಈ ವರ್ಷ ಜ.10ರಿಂದ ಆರಂಭವಾಗಲಿದೆ